**ದಿನಾಂಕಃ 24.05.2023**
**ಸ್ಪೆಷಲ್ ಕೇಸ್ ನಂ. 54/2019**
**ಪ್ರಾಸಾಃ 1**

**(ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು)**

**ಮುಂದುವರಿದ ಪಾಟೀಸವಾಲು ಆರೋಪಿ ಪರ ಶ್ರೀ ಎ.ಜಿ.ಜಿ., ವಕೀಲರಿಂದ ಆದೇಶ ದಿನಾಂಕಃ06.04.2023 ರ ಪ್ರಕಾರಃ-**

ನಾನು ಕಳೆದ ಕಾಂಗ್ರೇಸ್ ಪಕ್ಷದ ಕಾರ್ಯಕರ್ತ ಅಂದರೆ ಸಾಕ್ಷಿ ನಾನು ಕಳೆದ 1 ವರ್ಷದಿಂದ ಕಾಂಗ್ರೇಸ್ ಪಕ್ಷದ ಕಾರ್ಯಕರ್ತನಾಗಿ ಕೆಲಸ ಮಾಡುತ್ತಿದ್ದೇನೆ. ನಾನು ಹಾಗೂ ಕಾಂಗ್ರೇಸಿನ ಎಂ.ಎಲ್.ಎ., ಮಂತರ್ ಗೌಡ ಜೊತೆಯಾಗಿ ಹಾಕಿದ ಫ್ಲೆಕ್ಸ್ ನ ಫೋಟೋ ಈಗ ತೋರಿಸಿದ ಫೋಟೋ ಅಂದರೆ ಸರಿ. ಈ ಫೋಟೋ 2 ವರ್ಷಗಳ ಹಿಂದೆ ತೆಗೆದ ಫೋಟೋ ಅಂದರೆ ಸಾಕ್ಷಿ 6 ತಿಂಗಳ ಮೊದಲು ತೆಗೆದ ಫೋಟೋ ಎಂದು ನುಡಿಯುತ್ತಾರೆ. ಈಗ ನಾನು ನೋಡುತ್ತಿರುವ ಫೋಟೋದಲ್ಲಿ ನಾನು, ಶಾಸಕ ಅಪ್ಪಚ್ಚು ರಂಜನ್ ಹಾಗೂ ಚಾಸಾ-6 ಸುಬ್ರಮಣಿ ಇದ್ದಾರೆ ಅಂದರೆ ಸರಿ. ಸದರಿ 2 ಫೋಟೋಳನ್ನು ನಿಡಿ-1 ಹಾಗೂ 2 ಎಂದು ಸಾಬೀತುಪಡಿಸುವ ಷರತ್ತಿನೊಂದಿಗೆ ಹಾಗೂ ಮಾನ್ಯ ಸರ್ಕಾರಿ ಅಭಿಯೋಜಕರ ತಕರಾರಿಗೆ ಒಳಪಟ್ಟು ಗುರುತಿಸಲಾಯಿತು. ನನ್ನ ಮೊದಲ ಮತದಾರರ ಪಟ್ಟಿ ಓ.ಎಲ್.ವಿ., ಕಾನ್ವೆಂಟ್ ಬಾಣೆಯಲ್ಲಿ ಇತ್ತು. ಈಗಲು ಸಹ ಅಲ್ಲಿಯೇ ಇದೆ. ನಾನು ಮೊದಲು ಓ.ಎಲ್.ವಿ., ಕಾನ್ವೆಂಟ್ ಬಾಣೆಯಲ್ಲಿ ಇದ್ದೆ ನಂತರ ಗೋಣಿಮರೂರಿಗೆ **ನಮ್ಮ ಮನೆಯನ್ನು ಸ್ಥಳಾಂತರಿಸಲಾಯಿತು, ಆ** ಸಂದರ್ಭದಲ್ಲಿ **ನಾನು ಅಲ್ಲಿಯ ಮತದಾರರ ಪಟ್ಟಿಯಲ್ಲಿ ಇದ್ದೆವು, ಆ ನಂತರ ನಾನು ಬೆಂಗಳೂರಿಗೆ ಹೋಗಿ ನಂತರ** ಸೋಮವಾರಪೇಟೆಗೆ **ಬಂದು, ಪುನಃ** ಓ.ಎಲ್.ವಿ., ಕಾನ್ವೆಂಟ್ ಬಾಣೆಯ ಮತದಾರರ ಪಟ್ಟಿಯಲ್ಲಿ ನನ್ನ ಹೆಸರನ್ನು ಸೇರಿಸಿದ್ದೆನು. ಕಾನ್ವೆಂಟ್ ಬಾಣೆಯಲ್ಲಿ ಗ್ರಾಮಪಂಚಾಯತ್ ಚುನಾವಣೆಯಲ್ಲಿ ಆರೋಪಿ ದೇವಿಪ್ರಸಾದ್ ಎದುರು ಸೋತಿದ್ದರು ಅಂದರೆ ನನಗೆ ಗೊತ್ತಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. 2 ನೇ ಬಾರಿಯ ಚುನಾವಣೆಯಲ್ಲಿ ಆರೋಪಿ ದೇವಿಪ್ರಸಾದ್ ಎದುರು ಗೆದ್ದಿದ್ದರು ಅಂದರೆ ಸರಿ. ಆರೋಪಿ ಬಿ.ಜೆ.ಪಿ.,

ಪಕ್ಷಕ್ಕೆ ಸೇರಿದವರು ಅಂದರೆ ಸರಿ. ನಾನು ಬೋವಿ ಸಮಾಜದ ಅಧ್ಯಕ್ಷನಾದ ಕಾರಣ ನನಗೆ ಕಾನ್ವೆಂಟ್ ಬಾಣೆಯಲ್ಲಿ ಚುನಾವಣೆಗೆ ನಿಲ್ಲಬೇಕು ಎಂಬ ಉದ್ದೇಶ ಇತ್ತು ಅಂದರೆ ಸರಿಯಲ್ಲ. ಆ ಕಾರಣದಿಂದ ನಾನು ಗೋಣಿಮರೂರಿನಿಂದ ಕಾನ್ವೆಂಟ್ ಬಾಣೆಗೆ ನನ್ನ ಮತದಾರರ ಪಟ್ಟಿಯನ್ನು ವರ್ಗಾಯಿಸಿಕೊಂಡದ್ದು ಅಂದರೆ ಸರಿಯಲ್ಲ. ನಾನು ಅಲ್ಲಿ ಗುತ್ತಿಗೆದಾರ ಅಂದರೆ ಸರಿಯಲ್ಲ. ನನಗೆ ಟ್ರಾನ್ಸ್ ಫೋರ್ಟ್ ಲಾರಿ ಇದೆ. ನನ್ನ ಬಳಿ 2 ಕಾರು, ಒಂದು ಬೈಕ್ ಇದೆ. ನನ್ನ ಆದಾಯದ ಮೂಲ ಟ್ರಾನ್ಸ್ ಪೋರ್ಟ್. ನಾನು ಚಿಕ್ಕಪುಟ್ಟ ಗುತ್ತಿಗೆಯನ್ನು ಮಾಡುತ್ತೇನೆ ಅಂದರೆ ಸರಿ. ನನ್ನ ತಂದೆ ಕಲ್ಲು ಒಡೆಯುತ್ತಾರೆ.

ಕರೆಂಟ್ ಕಂಬ ಹಾಗೂ ರಾಜಣ್ಣನ ಅಂಗಡಿಯ ಮಧ್ಯದಲ್ಲಿ ಒಂದು ರಸ್ತೆ ಇದೆ. ಕರೆಂಟ್ ಕಂಬದ ಕೆಳಗೆ ಆರೋಪಿ ಕಾರು ನಿಲ್ಲಿಸಿದ್ದರು. ಆರೋಪಿ ಕಾರು ನಿಲ್ಲಿಸಿದ್ದರಿಂದ ರಾಜಣ್ಣನ ಅಂಗಡಿಗೆ ಬರಬೇಕು ಅಂದರೆ ರಸ್ತೆ ದಾಟಿ ಬರಬೇಕು ಅಂದರೆ ಸರಿಯಲ್ಲ. ರಾಜಣ್ಣನ ಅಂಗಡಿಯ ಹಿಂಭಾಗದಲ್ಲಿ ನಿಂತರೆ ರಸ್ತೆಯಲ್ಲಿ ಇದ್ದ ಕಾರಣು ಕಾಣಿಸುವುದಿಲ್ಲ ಅಂದರೆ ಸರಿಯಲ್ಲ. ಕಾರು ನಿಲ್ಲಿಸಿದ ಜಾಗದಿಂದ ರಾಜಣ್ಣನ ಅಂಗಡಿಯ ಹಿಂಭಾಗಕ್ಕೆ ಸುಮಾರು 10 ರಿಂದ 12 ಅಡಿ ದೂರ ಇದೆ. ಕಾರು ಸೋಮವಾರಪೇಟೆಗೆ ಹೋಗುವ ರಸ್ತೆಗೆ ಮುಖ ಮಾಡಿ ನಿಂತಿತ್ತು. ನನ್ನ ಮನೆ ಕಾರು ನಿಲ್ಲಿಸಿದ್ದಲ್ಲಿಂದ ಸ್ವಲ್ಪ ಮೇಲುಗಡೆ ಇದೆ, ಅಲ್ಲಿ ಬೇರೆ ಅಂಗಡಿ ಇಲ್ಲ. ರಾಜಣ್ಣನ ಅಂಗಡಿಯಿಂದ ನಮ್ಮ ಮನೆಗೆ ಸುಮಾರು 250 ಮೀಟರ್ ಇರಬಹುದು, ಆರೋಪಿಯ ಮನೆಗೆ ಸುಮಾರು 40 ಮೀಟರ್ ದೂರ ಇರಬಹುದು. ನಾನು ಆರೋಪಿಗೆ ಫೋನ್ ಮಾಡಿದ ಸಂದರ್ಭದಲ್ಲಿ ನಾನು ಒಬ್ಬನೇ ಇದ್ದೆ ಅಂದರೆ ಸರಿಯಲ್ಲ. ಆರೋಪಿ ಬಂದಾಗ ಆತ ಒಬ್ಬರೇ ಇದ್ದರು ಅಂದರೆ ಸರಿ. ಆರೋಪಿ ರಾಜಣ್ಣನ ಅಂಗಡಿ ಬಳಿ ಬಂದಾಗ ಅವರ ಕೈಯಲ್ಲಿ ಯಾವುದೇ ಆಯುಧಗಳು ಇರಲಿಲ್ಲ. ಆರೋಪಿ ನನಗೆ ಸುಮಾರು ವರ್ಷಗಳಿಂದ ಪರಿಚಯ ಇದೆ. ಆರೋಪಿ ತಂದೆಗೆ ಹಚ್ಚಿನಾಡಿನಲ್ಲಿ ತೋಟ ಇದೆ ಅಂದರೆ ನನಗೆ ಗೊತ್ತಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ಆರೋಪಿಗೆ ಪರವಾನಗಿ ಇರುವ ಕೋವಿ ಇದೆ ಮತ್ತು ಸದರಿ ಕೋವಿಯನ್ನು ಇಟ್ಟುಕೊಂಡು ಅವರು ಕಾರಿನಲ್ಲಿ ಓಡಾಡುತ್ತಾರೆ ಅಂದರೆ ನನಗೆ ಗೊತ್ತಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ಆರೋಪಿಗೆ ಹಚ್ಚಿನಾಡಿನಲ್ಲಿ ತೋಟ ಇರುವ

ಕಾರಣ ಮತ್ತು ಅಲ್ಲಿ ಆನೆಗಳ ಕಾಟ ಜಾಸ್ತಿ ಇದ್ದ ಕಾರಣ ಅವರು ಹೆಚ್ಚಾಗಿ ಕೋವಿ ಉಪಯೋಗಿಸುತ್ತಾರೆ ಅಂದರೆ ನನಗೆ ಗೊತ್ತಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ಆರೋಪಿ ಸಾಮಾನ್ಯವಾಗಿ ಕಾರಿನಲ್ಲಿ ಕೋವಿ ಇಟ್ಟುಕೊಂಡಿರುತ್ತಾರೆ ಎಂಬ ವಿಚಾರ ನನಗೆ ಗೊತ್ತಿಲ್ಲ. ನನ್ನ ಜೊತೆ ಮಾತನಾಡಿದ ನಂತರ ಆರೋಪಿ ಹೋಗಿ ಕಾರಿನ ಒಳಗೆ ಕುಳಿತಿದ್ದರು ಅಂದರೆ ಸರಿಯಲ್ಲ. ಆರೋಪಿಗೆ ಹಲ್ಲೆ ಮಾಡುವ ಉದ್ದೇಶದಿಂದ ನಾನು ಹಲವಾರು ಹುಡುಗರನ್ನು ಜೊತೆ ಮಾಡಿದ್ದೆ ಅಂದರೆ ಸರಿಯಲ್ಲ. ನನ್ನ ಜೊತೆ ಮಾತನಾಡಿ ಆರೋಪಿ ಕಾರಿಗೆ ಹತ್ತುವ ಸಂದರ್ಭದಲ್ಲಿ ನಾನು ಹಾಗೂ ನನ್ನ ಜೊತೆ ಇದ್ದ ಹುಡುಗರು ಕಾರಿನ ಒಳಗೆ ಇದ್ದ ಆರೋಪಿಗೆ ಹಲ್ಲೆ ಮಾಡಲು ಪ್ರಯತ್ನಿಸಿದ್ದೆವು ಅಂದರೆ ಸರಿಯಲ್ಲ. ಆರೋಪಿ ತೊಂದರೆ ಮಾಡುತ್ತಾನೆ ಎಂಬ ಉದ್ದೇಶದಿಂದ ನಾನೇ ಆರೋಪಿಯ ಕೋವಿಯನ್ನು ಕಿತ್ತುಕೊಂಡಿದ್ದೆ ಅಂದರೆ ಸರಿಯಲ್ಲ. ನಾನು ಕೋವಿಯನ್ನು ಕಿತ್ತುಕೊಳ್ಳುವ ಸಂದರ್ಭದಲ್ಲಿ ಕೋವಿ ಮಿಸ್ ಫಯರ್ ಆಗಿ ನನಗೆ ಗುಂಡು ತಗುಲಿತ್ತು ಅಂದರೆ ಸರಿಯಲ್ಲ. ಆರೋಪಿ ನನಗೆ ಎದೆಯ ಭಾಗಕ್ಕೆ ಗುರಿ ಇಟ್ಟು ಯಾವುದೇ ಗುಂಡು ಹೊಡೆದಿಲ್ಲ ಅಂದರೆ ಸರಿಯಲ್ಲ. ಆರೋಪಿಗೆ ನನಗೆ ಗುಂಡು ಹೊಡೆದು, ನನ್ನನ್ನು ಕೊಲ್ಲುವ ಉದ್ದೇಶ ಇರಲಿಲ್ಲ ಅಂದರೆ ಸರಿಯಲ್ಲ. ನನಗೆ ರಾಜಕೀಯವಾಗಿ ಕಾನ್ವೆಂಟ್ ಬಾಣೆಯಲ್ಲಿ ಬೆಳೆಯುವ ಉದ್ದೇಶದಿಂದ, ನಾನಾಗಿಯೇ ಆರೋಪಿಗೆ ತೊಂದರೆ ಕೊಡುವ ಉದ್ದೇಶದಿಂದ ಅವರ ವಿರುದ್ಧ ಸುಳ್ಳು ಪಿರ್ಯಾದು ನೀಡಿದ್ದೇನೆ ಅಂದರೆ ಸರಿಯಲ್ಲ. ಆರೋಪಿ ನನ್ನ ಬಳಿ ಯಾವುದೇ ಗಲಾಟೆಗೆ ಬಂದಿರಲಿಲ್ಲ, ನಾನು ಅವರಿಗೆ ಹಲ್ಲೆ ಮಾಡಲು ಹೊಂಚು ಹಾಕಿದ್ದೆ ಅಂದರೆ ಸರಿಯಲ್ಲ. ಆ ಕಾರಣದಿಂದ ನಾನಾಗಿಯೇ ಆರೋಪಿಗೆ ಫೋನ್ ಮಾಡಿ ಅವರನ್ನು ಕರೆಸಿದ್ದೆ ಅಂದರೆ ಸರಿಯಲ್ಲ. ನಾನು ಹೇಳಿದಂತಹ ಸಾಕ್ಷಿಗಳು ಸ್ಥಳದಲ್ಲಿ ಇದ್ದಿರಲಿಲ್ಲ, ಬೇರೆ ಹುಡುಗರುಗಳನ್ನು ಸೇರಿಸಿಕೊಂಡು ನಾನು ಅವರಿಗೆ ಹಲ್ಲೆ ಮಾಡಲು ಹೊಂಚು ಹಾಕಿದ್ದೆ ಅಂದರೆ ಸರಿಯಲ್ಲ. ಅಲ್ಲೇ ಇದ್ದ ವ್ಯಕ್ತಿಗಳನ್ನು ಸಾಕ್ಷಿ ಮಾಡಿದರೆ ತೊಂದರೆ ಆಗುತ್ತದೆ ಎಂಬ ಉದ್ದೇಶಕ್ಕೆ ನನಗೆ ಬೇಕಾದಂತಹ ಸಾಕ್ಷಿಗಳನ್ನು ನಾನೇ ಸೃಷ್ಟಿಸಿದ್ದೇನೆ ಅಂದರೆ ಸರಿಯಲ್ಲ. ಆರೋಪಿ ನನ್ನ ವಿರುದ್ಧ ಯಾವುದೇ ರೀತಿಯಲ್ಲಿ ಕೋವಿ ತೋರಿಸಿ ಗುಂಡು ಹೊಡೆದಿರುವುದಿಲ್ಲ, ನಾನೇ ಅವರ ಕೈಯಿಂದ ಕೋವಿಯನ್ನು ಕಿತ್ತುಕೊಂಡಿದ್ದೆ ಅಂದರೆ ಸರಿಯಲ್ಲ. ನನ್ನ ಮೇಲೆ ಕೋವಿಯಿಂದ ಗುಂಡು

ಹೊಡೆಯುವ ಯಾವುದೇ ಉದ್ದೇಶ ಆರೋಪಿಗೆ ಇರಲಿಲ್ಲ ಅಂದರೆ ಸರಿಯಲ್ಲ. ಆರೋಪಿ ನನಗೆ ಯಾವತ್ತು ಜಾತಿ ನಿಂದನೆ ಮಾಡಿಲ್ಲ ಮತ್ತು ಅವರಿಗೆ ಆ ರೀತಿಯ ಯಾವುದೇ ಉದ್ದೇಶ ಇರಲಿಲ್ಲ ಅಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

Sd/-xxx
1 ನೇ ಹೆಚ್ಚುವರಿ ಜಿಲ್ಲಾಮತ್ತು ಸತ್ರ ನ್ಯಾಯಾಧೀಶರು,
ಕೊಡಗು, ಮಡಿಕೇರಿ.